ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಿವರು):

ಅ) 2001-02ನೇ ಸಾಲಿನಲ್ಲಿ ತೆಂಗಿನ ನುಸಿ ನಿಯಂತ್ರಣೆಗಾಗಿ 2.31 ಲಕ್ಷ ಲೀಟರ್ ಔಷಧಿಯನ್ನು ಖರೀದಿಸಲಾಗಿದೆ. ಇದರ ಮೌಲ್ಯ ರೂ.960.00 ಲಕ್ಷಗಳು.

ಆ) ಇಲ್ಲ. 1.08 ಲಕ್ಷ ಲೀಟರ್ ಔಷಧಿ ಉಳಿದಿರುತ್ತದೆ. ಇದರ ಮೌಲ್ಯ ರೂ.447.00 ಲಕ್ಷಗಳು.

ಇ) ಶೇ.100 ರಷ್ಟು

ಈ) ಔಷದೋಪಚಾರ ಮಾಡಿದ ಮೇಲೆ ತೆಂಗಿನ ಮರಗಳು ಹಾಳಾಗಿರುವುದಿಲ್ಲ. ಆದರೆ ಕೆಲವು ಅಪರೂಪದ ಪ್ರಕರಣದ ಔಷದೋಪಚಾರದಿಂದ ಪಾರ್ಶ್ವ ಪರಿಣಾಮಗಳು ಉಂಟಾಗಿರುವ ಬಗ್ಗೆ ವರದಿಯಾಗಿದೆ.

ಉ) ಹೌದು. ಕೆಲವು ಸಮಿತಿಗಳ ವರದಿ ಬಂದಿದೆ.

**ಯಲಬುರ್ಗ ಮತ್ತು ಕುಷ್ಟಗಿ ತಾಲ್ಲೂಕಿಗೆ ನೀರಾವರಿ ಸೌಲಭ್ಯ**

1426 (1721) ಶ್ರೀ ಶಿವ ಶರಣಪ್ಪ ಗೌಡ ಪಾಟೀಲ್ (ಯಲ್‌ಬುರ್ಗ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆಯ ಯಲಬುರ್ಗ ಮತ್ತು ಕುಷ್ಟಗಿ ತಾಲ್ಲೂಕುಗಳಿಗೆ (ಯು.ಕೆ.ಪಿ) ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ನೀರಾವರಿ ಆಗುವುದು ಸಾಧ್ಯವಿದೆಯೇ;

ಆ) ತಜ್ಞರ ಅಭಿಪ್ರಾಯವೇನು;

ಇ) ಈ ವಿಚಾರದಲ್ಲಿ ಸಾರ್ಕರದ ಅಭಿಪ್ರಾಯ ಏನು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಕೊಪ್ಪಳ ಜಿಲ್ಲೆಯ ಯಲಬುರ್ಗ ಮತ್ತು ಕುಷ್ಟಗಿ ತಾಲ್ಲೂಕುಗಳಿಗೆ ಕೃಷ್ಣಾ ನದಿಯಿಂದ ನೀರಾವರಿ ಸೌಲಭ್ಯ ಕಲ್ಪಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) -

ಇ) ರಾಜ್ಯದ ಜಲ ನೀತಿಯಲ್ಲಿ ತಿಳಿಸಿರುವಂತೆ ಕರ್ನಾಟಕ ರಾಜ್ಯದ ಅತ್ಯಂತ ಬರ ಪೀಡಿತ ಪ್ರದೇಶಗಳಿಗೆ ನೀರನ್ನು ಒದಗಿಸುವ ಗುರಿ ಹೊಂದಲಾಗಿದೆ. ಈ ನಿಲುವಿನಂತೆ ಕೃಷ್ಣ ಕೊಳದಲ್ಲಿ ಲಭ್ಯವಿರುವ ಹೆಚ್ಚುವರಿ ನೀರಿನ ಪ್ರಮಾಣಕ್ಕೆ ಅನುಗುಣವಾಗಿ ಸಮಗ್ರ ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗುವುದು.

**ರಾಜ್ಯದಲ್ಲಿ ಪಡಿತರ ಚೀಟಿಗಳ ವಿತರಣೆ**

1427 (1774) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಾರ್ವಜನಿಕರಿಗೆ ವಿತರಿಸಲಾಗಿದ್ದ ಹಸಿರು ಕಾರ್ಡುಗಳನ್ನು ರದ್ದು ಮಾಡುವಾಗ ಸರಿಯಾಗಿ ಸರ್ವೆ ಕಾರ್ಯ ನಡೆದಿದೆಯೇ;

ಆ) ಹಸಿರು ಕಾರ್ಡುಗಳನ್ನು ಯಾವ ಮಾನದಂಡದ ಮೇಲೆ ರದ್ದುಪಡಿಸಲಾಗಿದೆ;

ಇ) ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ಎಷ್ಟು ಹಳದಿ ಕಾರ್ಡುಗಳನ್ನು ವಿತರಿಸಲಾಗಿದೆ; ಜಿಲ್ಲಾವಾರು ವಿವರಗಳನ್ನು ನೀಡುವುದು;

ಈ) ಹಳದಿ ಕಾರ್ಡುಗಳ ವಿತರಣೆಯಲ್ಲಿ ಲೋಪದೋಷಗಳು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):

ಅ) ರಾಜ್ಯದಲ್ಲಿ ನೈಜ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳನ್ನು ಗುರ್ತಿಸಲು ಮನೆ ಮನೆ ಸಮೀಕ್ಷಾ ಕಾರ್ಯವು ನಡೆದಿದ್ದು, ಈ ಕಾರ್ಯವು ಪ್ರಗತಿಯಲ್ಲಿರುತ್ತದೆ. ಬೆಂಗಳೂರು ನಗರ, ಬಳ್ಳಾರಿ, ಬಾಗಲಕೋಟೆ ದಕ್ಷಿಣ ಕನ್ನಡ, ಕೊಡಗು, ಮೈಸೂರು ಈ ಜಿಲ್ಲೆಗಳಲ್ಲಿ ಸಮೀಕ್ಷೆ ನಡೆಸಿ ಅರ್ಹತೆ ಇರುವ ಕುಟುಂಬಗಳಿಗೆ ಹಳದಿ ಕಾರ್ಡುಗಳನ್ನು ವಿತರಿಸಲಾಗಿದೆ. ಹಾಗೂ ಅಂತಹವರಿಂದ ಹಸಿರು ಪಡಿತರ ಚೀಟಿಗಳನ್ನು ಹಿಂತೆಗೆದುಕೊಳ್ಳಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ವಿತರಿಸಲಾಗಿರುವ ಹಳದಿ ಪಡಿತರ ಚೀಟಿಗಳ ವಿವರ ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಜಿಲ್ಲಾ ಕೇಂದ್ರದ ಹೆಸರು | ವಿತರಿಸಲಾಗಿರುವ ಹಳದಿ ಪಡಿತರ ಚೀಟಿಗಳು |
|---|---|---|
| 1. | ಬೆಂಗಳೂರು ನಗರ | 13,534 |
| 2. | ಬಳ್ಳಾರಿ | 82,216 |
| 3. | ಬಾಗಲಕೋಟೆ | 22,449 |
| 4. | ದಕ್ಷಿಣ ಕನ್ನಡ | 32,537 |
| 5. | ಕೊಡಗು | 10,545 |
| 6. | ಮೈಸೂರು | 65,263 |
| | ಒಟ್ಟು | 2,26,544 |

ಈ) ಈಗಾಗಲೇ ವಿತರಿಸಲಾಗಿರುವ ಹಳದಿ ಪಡಿತರ ಚೀಟಿಗಳಲ್ಲಿ ಲೋಪದೋಷಗಳಾಗಿರುವುದು ಕಂಡುಬಂದಿರುವುದಿಲ್ಲ.

**ರಾಜ್ಯದಲ್ಲಿರುವ ಸ್ತ್ರೀಶಕ್ತಿ ಸಂಘಗಳಿಗೆ ನೀಡುವ ಸಹಾಯಧನ**

1428 (1775) ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸ್ತ್ರೀಶಕ್ತಿ ಸಂಘಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಆ) ಸ್ತ್ರೀಶಕ್ತಿ ಸಂಘಗಳ ನಿರ್ವಹಣೆ ಮತ್ತು ಕಾರ್ಯಕ್ರಮಗಳೇನು? ಇದರ ಮೇಲ್ವಿಚಾರಣೆ ನೋಡಿಕೊಳ್ಳುವವರು ಯಾರು ಇವರಿಗೆ ಸರ್ಕಾರದಿಂದ ಸಹಾಯ ಧನ ನೀಡಲಾಗುತ್ತಿದೆಯೇ? ನೀಡುತ್ತಿದ್ದಲ್ಲಿ ಯಾವ ಪ್ರಮಾಣದಲ್ಲಿ ನೀಡಲಾಗುತ್ತಿದೆ.

ಇ) ಸ್ತ್ರೀಶಕ್ತಿ ಕಾರ್ಯಕ್ರಮಗಳಿಂದ ಮಹಿಳೆಯರಿಗೆ ಆಗಿರುವ ಅನುಕೂಲಗಳೇನು? (ಜಿಲ್ಲಾವಾರು ಮತ್ತು ವರ್ಗವಾರು ವಿವರಗಳನ್ನು ನೀಡುವುದು)